**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 42/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 7**

**ದಿನಾಂಕಃ** 01.07.2026 **ಸಿಡಬ್ಲ್ಯೂ 8**

| | |
|---|---|
| ಹೆಸರು | ಗಣೇಶ ರಾಮಪ್ಪ ಲಮಾಣಿ |
| ತಂದೆಯ ಹೆಸರು | ರಾಮಪ್ಪ |
| ವಯಸ್ಸು | 21 ವರ್ಷ |
| ಉದ್ಯೋಗ | ವಿದ್ಯಾರ್ಥಿ |
| ವಾಸ ಸ್ಥಳ | ಮೇಡ್ಲೇರಿ ತಾಂಡ, ರಾಣೆಬೆನ್ನೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಜುಲೈ-2023 ರಂದು ನಾನು ಶಿವಮೊಗ್ಗಕ್ಕೆ ಕಾಲೇಜಿಗೆ ಅಡ್ಮಿಷನ್ ಮಾಡಿಸಿ ಮರಳ ಬರುವಾಗ ಸುಮಾರು ಸಂಜೆ 5 ಗಂಟೆ ಸಮಯದಲ್ಲಿ ಶಿವಮೊಗ್ಗ ಹರಿಹರ ಸರ್ಕಲ್ ನಲ್ಲಿ ಲಾರಿ ಮತ್ತು ಬಸ್ ಮುಖಾಮುಖಿ ಡಿಕ್ಕಿಯಾಗಿರುತ್ತವೆ. ನನಗೆ ಪೆಟ್ಟಾಗಿ ಹಲ್ಲು ಮುರಿದಿರುತ್ತದೆ ಮತ್ತು ಬೆನ್ನಿಗೆ ಪೆಟ್ಟಾಗಿದ್ದು ಕೈಗೆ ಮೂಗಿಗೆ ಪೆಟ್ಟಾಗಿರುತ್ತದೆ. ಬಸ್ ನ ಚಾಲಕನ ಹೆಸರು ಬಸನರಾಜ ಎಂದು ಇರುತ್ತದೆ. ಲಾರಿ ಚಾಲಕನ ಹೆಸರು ಮತ್ತು ಬಸ್ ಮತ್ತು ಲಾರಿಯ ನಂಬರ್ ಗೊತ್ತಿರುವುದಿಲ್ಲ. ಆತನನ್ನು ನೋಡಿದರೆ ನನಗೆ ಗುರುತಿಸಲಾಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ನಾವು ಆ ದಿನ ಹೊನ್ನಾಳಿ ಮಾರ್ಗವಾಗಿ ಹೋಗುತ್ತಿರುವಾಗ ಹರಿಹರ ಶಿವಮೊಗ್ಗ ರಸ್ತೆ ಹನಿ ಗಾರ್ಡನ್ ಡಾಬಾ ಹೋಟೆಲ್ ಮುಂಭಾಗ ಬಸ್ ಚಾಲಕನು ಅತೀವಾಗ ಮತ್ತು ಅಜಾಗರೂಕತೆಯಿಂದ ಬಸ್ ಚಲಾಯಿಸಿಕೊಂಡು ಬಂದು ಆತನ ಎದುರುಗಡೆ ಲಾರಿ ಚಾಲಕನೂ ಸಹ ಅತೀವಾಗ ಮತ್ತು ಅಜಾಗರೂಕತೆಯಿಂದ ಲಾರಿ ಚಲಾಯಿಸಿಕೊಂಡು ಬಂದು ಎದುರು ಬದುರು ಡಿಕ್ಕಿಯಾಗಿರುತ್ತದೆ ಎಂದರೆ ಸರಿ. ಬಸ್ ನ ನಂ. ನೋಡಲಾಗಿ ಕೆಎ-09 ಎಫ್ 5465 ಲಾರಿಯ ಸಂ.ಕೆಎ-14 ಎ-8673 ಇದ್ದು ಲಾರಿ ಚಾಲಕನ ಹೆಸರು ಮೊಹಮದ್ ಖಾನ್, ಮಲೆಬೆನ್ನೂರು ಅಂತ ಇತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ಉತ್ತರಿಸುತ್ತಾರೆ. ಈ ಕುರಿತು ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಶ್ರೀ ಎ ವಿ ಎಂ ವಕೀಲರಿಂದಃ

ನಾನು ಪೋಲೀಸರ ಮುಂದೆ ಯಾವ ದಿನ ಹೇಳಿಕೆ ನೀಡಿರುತ್ತೇನೆ ಎಂದು ನೆನಪಿರುವುದಿಲ್ಲ. ಯಾವ ಪೋಲೀಸ್ ಅಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ನಾನು ಬಸ್ ನ ಮಧ್ಯಭಾಗದಲ್ಲಿ ಆ ದಿನ ಕುಳಿತುಕೊಂಡಿದ್ದೆನು. ಬಸ್ ನ ಮುಂಭಾಗದಲ್ಲಿ ಏನಾಗುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಅಪಘಾತ ಯಾರ ತಪ್ಪಿನಿಂದ ಮತ್ತು ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪೋಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ